(೩) ಹಿರೇಕೆರೂರು ತಾಲ್ಲೂಕಿನಲ್ಲಿರುವ ಅಲ್ಪಸಂಖ್ಯಾತರ ತಾಂತ್ರಿಕ ತರಬೇತಿ ಸಂಸ್ಥೆಗೆ ಅನುದಾನ ನೀಡದಿರುವುದು

SRI M. L. HINDASGERI.—Sir, there is a minority Tch. Training Institution in Herekerur Taluk, District Dharwad and the management are requesting the Government to release grants for the Payment of salaries of the teachers. The Government has not so far released the grants to the management. The non-release of grant to this minority Institution has caused great hardship to the management to run Institution.

ಶ್ರೀ ಡಿ. ಮಂಜುನಾಥ್.—ಮಾನ್ಯ ಸಭಾಧ್ಯಕ್ಷರೇ, ಖಾಸಗೀ ವಿದ್ಯಾ ಸಂಸ್ಥೆಯವರು ಉರ್ದು ಟಿ. ಸಿ. ಹೆಚ್. ಶಾಲೆಯನ್ನು ನಡೆಸುತ್ತಿದ್ದು ಅನುದಾನ ಕೊಡಬೇಕೆಂದು ಕೇಳುತ್ತಿದ್ದಾರೆ. ಇತ್ತೀಚೆಗೆ ಟಿ. ಸಿ, ಹೆಚ್. ಅನ್ನು ಯಾರು ನಡೆಸುತ್ತಿದ್ದಾರೆ ಅವರಿಗೆ ಅನುದಾನ ಕೊಡಬಾರದೆಂದು ನಿಲ್ಲಿಸಿದ್ದೇವೆ. ಅವರೂ ಸಹ ನನ್ನ ಹತ್ತಿರ ಬಂದಿದ್ದರು, ಮನವಿಯನ್ನು ಕೂಡ ಕೊಟ್ಟಿದ್ದಾರೆ ಇರುವ ಕಾನೂನು ಪ್ರಕಾರ ಕೊಡುವುದಕ್ಕೆ ಕಷ್ಟವಾಗುತ್ತದೆ.

(೪) ಮೈಸೂರು ವಿಶ್ವವಿದ್ಯಾನಿಲಯದಲ್ಲಿರುವ ಕನ್ನಡ ಬೆರಳಚ್ಚು ಯಂತ್ರಗಳನ್ನು ಸರ್ಕಾರಕ್ಕೆ ವಾಪಸ್ ಮಾಡಿರುವುದು

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸರ್ಕಾರವು ಮೈಸೂರು ವಿಶ್ವವಿದ್ಯಾನಿಲಯದ ಉಪಯೋಗಕ್ಕಾಗಿ ಕಳುಹಿಸಿದ್ದ ೩೬ ಕನ್ನಡ ಬೆರಳಚ್ಚು ಯಂತ್ರಗಳನ್ನು ಉಪ ಕುಲಪತಿಯವರು ಇರಲಿಲ್ಲವೆಂಬ ಕಾರಣದ ಮೇಲೆ ವಾಪಸ್ ಕಳುಹಿಸಿರುವುದಾಗಿ ಪರಿಷತ್ತಿಗಿದೆ. ಕನ್ನಡವನ್ನು ಜಾರಿ ಮಾಡುವ ದೃಷ್ಟಿಯಿಂದ ಕಳುಹಿಸಿದ್ದವುಗಳನ್ನು ವಾಪಸು ಕಳುಹಿಸಿರುವ ಅಧಿಕಾರಿಗಳ ಧೋರಣೆ ಕನ್ನಡಕ್ಕೆ ತೋರಿರುವ ದ್ರೋಹ ಮಾತ್ರವಲ್ಲ ಸರ್ಕಾರಕ್ಕೆ ತೋರಿರುವ ಅವಿಧೇಯ ವರ್ತನೆ. ಮೈಸೂರಿನಲ್ಲಿ ಉಪಕರಿಲತಿಗಳಿಲ್ಲದಿದ್ದರೆ ವಿಶ್ವವಿದ್ಯಾನಿಲಯವೇ ? ಅಥವಾ ಉಪ ಕುಲಪತಿಗಳ ಆಜ್ಞೆ ಇಲ್ಲದೆ ಅಧಿಕಾರಿಗಳು ಏನೂ ಮಾಡಬಾರದೆಂಬ ಸರ್ವಾಧಿಕಾರಿ ಆದೇಶವಿದೆಯೇ ? ಸಂಬಂಧಪಟ್ಟ ಸಚಿವರು ಈ ಬಗ್ಗೆ ಈಗಾಗಲೇ ಏನು ಕ್ರಮ ಕೈಗೊಂಡಿದ್ದಾರೆ ?

ಶ್ರೀ ಡಿ. ಮಂಜುನಾಥ್.—ಕನ್ನಡದಲ್ಲೇ ಎಲ್ಲಾ ವ್ಯವಹಾರ ನಡೆಯುತ್ತಿದೆ. ಬಹುತೇಕ ಕನ್ನಡ ಟೈಪ್‌ರೈಟರ್‌ಗಳು ಇರುವುದರಿಂದ ವಾಪಸ್ ಕಳಿಸಿರಬಹುದು. ಕನ್ನಡದಲ್ಲಿ ವ್ಯವಹಾರ ನಡೆಸ ಬೇಕೆಂದು ಸರಕಾರದ ಆದೇಶ ಇದೆ.

(೫) ಶಿಕಾರಿಪುರ ತಾಲ್ಲೂಕಿನ ಕಾಗೆನಹಳ್ಳಿ ಗ್ರಾಮದ ಮಾಜಿ ಅಧ್ಯಕ್ಷರು ಮಾಡಿರುವ ಅಧಿಕಾರ ದುರುಪಯೋಗದ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಶಿಕಾರಿಪುರ ತಾಲ್ಲೂಕಿನ ಕಾಗೆನಹಳ್ಳಿ ಗ್ರಾಮದ ಮಾಜಿ ಚೇರ್ಮನ್ ಶ್ರೀ ಕೆಂಚವೀರಪ್ಪ ಇವರು ಅವರ ಅಧಿಕಾರಾವಧಿಯಲ್ಲಿ ಅನೇಕ ಭ್ರಷ್ಟಾಚಾರವನ್ನು ಮಾಡಿ ಅವರ ಅಧಿಕಾರ ದುರುಪಯೋಗ ಮಾಡಿಕೊಂಡು ಪಂಚಾಯ್ತಿಗೆ ಸೇರಿದ ಆಸ್ತಿ ತಮ್ಮ ಮತ್ತು ಅವರ ಬಂಧುಗಳ ಹೆಸರಿಗೆ ಮಾಡಿಕೊಂಡಿದ್ದಾರೆ. ಉದಾಹರಣೆಗೆ ನಾಗರ ಉಪ ವಿಭಾಗಾಧಿಕಾರಿಗಳು ಅವರ ಕಚೇರಿ ನಂ. ಸಿಟಿಸಿ ಸಿ.ಆರ್. ೮೩, ೮೪–೮೫ ದಿನಾಂಕ ೧೮.೧೦.೮೬ ರಂದು ಒಂದು ಆದೇಶ ಹೊರಡಿಸಿ ಆಸ್ಪತ್ರೆ ಕಟ್ಟಡ ಬೇಕೆಂದು ಚೆಕ್ ಮೂಲಕ ತಹಸೀಲ್ದಾರ್‌ರವರಿಂದ ಹಣ ಪಡೆದು ೯,೮೪೦ ರೂಪಾಯಿಗಳನ್ನು ದುರುಪಯೋಗ ಮಾಡಿಕೊಂಡಿರುವುದು ಸಾಬೀತಾಗಿದ್ದು ೧೫ ದಿವಸದೊಳಗಾಗಿ ಹಣ ವಸೂಲು ಮಾಡಲು ಆದೇಶ ನೀಡಿದರೂ ಅಧಿಕಾರಿಗಳ ಅಲಸ್ಯದಿಂದ ಈವರೆಗೆ ಹಣ ಸಂಗ್ರಹ ಮಾಡಿರುವುದಿಲ್ಲ. ಅದಲ್ಲದೆ ಇದೇ ಗ್ರಾಮಕ್ಕೆ ಸೇರಿದ ಸರ್ವೆ ನಂ. ೧೬೬ ರಲ್ಲಿ ೧ ಎಕರೆ ಜಮೀನು ಅಕ್ವೈರ್ ಮಾಡಿಕೊಂಡು ಆ ಜಮೀನನ್ನು ಕೆಂಚವೀರಪ್ಪ ಮತ್ತು ಅವರ ಬಂಧು ಗಳು ಅಕ್ರಮ ಪ್ರವೇಶ ಮಾಡಿ ಈವರೆಗೆ ಅವರೇ ಅಕ್ರಮಿಸಿಕೊಂಡಿದ್ದಾರೆ. ಇದೇ ಗ್ರಾಮದ